**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ: 447/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ರಘು ಯು ಎನ್ | **P.W -04** |
| **ತಂದೆಯ ಹೆಸರು** | : | ನಂಜುಂಡೇ ಗೌಡ | **C.W -02** |
| **ವಯಸ್ಸು** | : | 38 ವರ್ಷ | |
| **ಉದ್ಯೋಗ** | : | ಉಪ ವಲಯ ಅರಣ್ಯಾಧಿಕಾರಿ, ಕಳಸಾಪುರ ಶಾಖೆ, ಚಿಕ್ಕಮಗಳೂರು ವಲಯ. | |
| **ವಾಸಸ್ಥಳ** | : | ಚಿಕ್ಕಮಗಳೂರು. | |

**ದಿನಾಂಕಃ20-09-2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ ಎ.ಪಿ.ಪಿ. ಯವರಿಂದ::**

1. ನಾನು ದಿಃ13-03-2019 ರಿಂದ ದಿಃ03-11-2020 ರ ವರೆಗೂ ನಾನು ಶೃಂಗೇರಿಯ ವಲಯ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ, ಉಪ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

2. ದಿಃ 29-02-2020 ರಂದು ಚಾಸಾ-1 ರವರು ನನ್ನನ್ನು, ಚಾಸಾ-3 ಮತ್ತು ಚಾಸಾ-4 ರವರನ್ನು ಸಂಜೆ ಸುಮಾರು 4.00 ಗಂಟೆ ಸಮಯದಲ್ಲಿ ತಮ್ಮ ಕಛೇರಿಗೆ ಕರೆದು, ಕಾಂಚೀನಗರದ ವಾಸಿಯಾದ ಶಬರೀಶ್/1 ನೇ ಆರೋಪಿ, ಆನೆದಂತವನ್ನು ಸಾಗಾಣಿಕೆ ಮಾಡುವಾಗ ಚಿಕ್ಕಮಗಳೂರಿನ ಶಿರಗುಂದ ಬಳಿ ಚಿಕ್ಕಮಗಳೂರು ಗ್ರಾಮಾಂತರ ಠಾಣೆಯ ಪೋಲೀಸರು ಹಿಡಿದಿದ್ದು, ಸದರಿ ಶಬರೀಶ್/1 ನೇ ಆರೋಪಿಯು ತನ್ನ ಮನೆಯಲ್ಲಿ ವನ್ಯ ಜೀವಿಗಳನ್ನು ಅಕ್ರಮವಾಗಿ ಇಟ್ಟುಕೊಂಡಿರುವ ಬಗ್ಗೆ ಅವರಿಗೆ ಮಾಹಿತಿ ಇದ್ದು, 1 ನೇ ಆರೋಪಿಯ ಮನೆಯನ್ನು ಈ ಬಗ್ಗೆ ದಾಳಿ ನಡೆಸಿ ಪರಿಶೀಲಿಸಬೇಕಾಗಿ ನಮಗೆ ತಿಳಿಸಿರುತ್ತಾರೆ. ನಂತರ ಸಂಜೆ ಸುಮಾರು 4.30 ಗಂಟೆಗೆ ಚಾಸಾ-1, ನಾನು, ಚಾಸಾ-3 ಮತ್ತು ಚಾಸಾ-4 ರವರು ನಮ್ಮ ಇಲಾಖಾ ವಾಹನವಾದ ಕೆ ಎ -18 ಜಿ -701 ಜೀಪ್ ನಲ್ಲಿ ಅದರ ಚಾಲಕನಾದ ಪ್ರಕಾಶ್ ರವರೊಂದಿಗೆ 1 ನೇ ಆರೋಪಿಯ ಮನೆಯ ಕಡೆ ಹೊರಟಿರುತ್ತೇವೆ.

3. ನಂತರ 1 ನೇ ಆರೋಪಿಯ ಮನೆಯ ಬಳಿ ಹೋಗಿದಾಗ ಅಲ್ಲೇ ಇದ್ದ ಚಾಸಾ-5 ರಿಂದ ಚಾಸಾ-8 ರವರಿಗೆ ನಮಗೆ ಮಾಹಿತಿ ಇರುವ ವಿಚಾರವನ್ನು ತಿಳಿಸಿ, ದಾಳಿಗೆ ಪಂಚರಾಗಿ ಸಹಕರಿಸಲು ಕೇಳಿದ್ದು, ಸದರಿ ವ್ಯಕ್ತಿಗಳು ಅದಕ್ಕೆ ಒಪ್ಪಿ ದ ಕಾರಣ ಅವರನ್ನು ನಮ್ಮ ಜೊತೆ ಕರೆದುಕೊಂಡು 1 ನೇ ಆರೋಪಿಯ ಮನೆಗೆ ಹೋಗಿರುತ್ತೇವೆ. 1 ನೇ ಆರೋಪಿಯ ಮನೆಯಲ್ಲಿ ಅವರ ಹೆಂಡತಿ ಇದ್ದು, ಅವರಿಗೆ ಸಹ ನಮಗಿದ್ದ ಮಾಹಿತಿಯನ್ನು ತಿಳಿಸಿ, ದಾಳಿಗೆ ಸಹಕರಿಸುವಂತೆ ಸೂಚಿಸಿರುತ್ತೇವೆ ಮತ್ತು ಅವರು ಸಹ ಅದಕ್ಕೆ ಒಪ್ಪಿ ಗೆ ನೀಡಿದ್ದ ಕಾರಣ ನಾವು 1 ನೇ ಆರೋಪಿಯ ಮನೆಯ ಒಳಗೆ ಹೋಗಿ, ಹಾಲ್ ಅನ್ನು ಪರಿಶೀಲಿಸಿದಾಗ ನಮಗೆ ಯಾವುದೇ ವಸ್ತು ಅಥವಾ ಪ್ರಾಣಿ ಸಿಕ್ಕಿರುವುದಿಲ್ಲ.

4. ನಂತರ, ಸದರಿ ಮನೆಯ ಒಂದು ಕೋಣೆಗೆ ಹೋಗಿ ಪರಿಶೀಲಿಸಿದಾಗ ಸದರಿ ಕೋಣೆಯ ಒಂದು ಮೂಲೆಯಲ್ಲಿ 4 ಮರದ ತುಂಡುಗಳು ಇರುವುದು ನಮಗೆ ಕಂಡು ಬಂದಿರುತ್ತದೆ. ಚಾಸಾ-1 ರವರು ಸದರಿ ಮರದ ತುಂಡುಗಳನ್ನು ಪರಿಶೀಲಿಸಿ ಅದು ಶ್ರೀಗಂಧ ಮರದ ತುಂಡುಗಳು ಎಂದು ಖಾತ್ರಿ ಪಡಿಸಿಕೊಂಡಿರುತ್ತಾರೆ. ನಂತರ ಅದೇ ಕೋಣೆಯಲ್ಲಿದ್ದ ಒಂದು ಮಂಚದ ಕೆಳಗೆ ನಾವು ಪರಿಶೀಲಿಸಿದಾಗ ಅಲ್ಲಿ ನಮಗೆ ಒಂದು ಪ್ಲಾಸ್ಟಿಕ್ ಚೀಲ ಇರುವುದು ಕಂಡು ಬಂದಿದ್ದು, ಅದನ್ನು ಹೊರಗೆ ತೆಗೆದು ಪರಿಶೀಲಿಸಿ ನೋಡಿದಾಗ ಅದರಲ್ಲಿ ಶಸ್ತ್ರಾಸ್ತ್ರ ಗಳು ಹಾಗೂ ಸ್ಫೋಟಕ ವಸ್ತುಗಳು ಇರುವುದು ನಮಗೆ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಅದನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅದರಲ್ಲಿ (1) ಅಪೆಕ್ಸ್ ಎಂದು ಬರೆದಿರುವ ಕಪ್ಪು ಬಣ್ಣದ ಏರ್ ಗನ್, (2) ಬ್ಲಾಂಕಾ ಎಂದು ಬರೆದಿರುವ ಒಂದು ಪಿಸ್ತೂಲ್, (3) 3 ಪಿಸ್ತೂಲ್ ಪೆಲೆಟ್ಸ್ 2 ಸಂಖ್ಯೆ , (4) 4 ಫೈಬರ್ ಐಟಮ್ ಗಳು 30 ಸಂಖ್ಯೆ, (5) ರೈಫಲ್ ಪಿಲೆಟ್ ಗಳು 5 ಸಂಖ್ಯೆ , (6) ಎಲೆಕ್ಟ್ರಿಕಲ್ ಡೆಟೆನೋಟರ್ 2 ಸಂಖ್ಯೆ ಮತ್ತು ಪ್ರೇಮ್ ನ ಜೊತೆ ಇರುವ ಜೀವಂತ ಡೆಟೋನೇಟರ್ ಗಳು 7 ಸಂಖ್ಯೆ , (7) ಬ್ಲಾಸ್ಟಿಂಗ್ ಕನೆಕ್ಟಿಂಗ್ ವಯರ್ , (8) ಗನ್ ಪೌಡರ್ 50 ಗ್ರಾಂ, (9) ಗನ್ ಕ್ಲೀನಿಂಗ್ ಆಯಿಲ್ ಮತ್ತು ಜಿಲೆಟಿನ್ ಎಕ್ಸ್ ಪ್ಲೋಸಿವ್ ಟ್ಯೂಬ್ ಗಳು 3 ಸಂಖ್ಯೆ ಇರುವುದು ನಮಗೆ ತಿಳಿದು ಬಂದಿರುತ್ತದೆ.

5. ನಂತರ ನಮಗೆ 1 ನೇ ಆರೋಪಿಯ ಮನೆಯಿಂದ ದೊರೆತ ಶ್ರೀಗಂಧ ಮರದ 4 ತುಂಡುಗಳು ಮತ್ತು ಮೇಲೆ ಹೇಳಿದ ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನು ಒಂದು ಮಹಜರ್ ಮುಖೇನ, ಪಂಚರಾದ ಚಾಸಾ-3, ಚಾಸಾ-4 ಮತ್ತು ಚಾಸಾ-5 ರಿಂದ ಚಾಸಾ-8 ರವರ ಸಮಕ್ಷಮ ಸಂಜೆ 5.00 ಗಂಟೆಯಿಂದ 6.00 ಗಂಟೆ ಮಧ್ಯದಲ್ಲಿ ತಯಾರಿಸಿ ಇಲಾಖಾ ವಶಕ್ಕೆ ಪಡೆದುಕೊಂಡಿರುತ್ತೇವೆ. ಸದರಿ

ಮಹಜರ್ ಅನ್ನು ನಾನೇ ನನ್ನ ಕೈ ಬರವಣಿಗೆಯಲ್ಲಿ ಬರೆದಿರುತ್ತೇನೆ. ಸದರಿ ಮಹಜರ್ ಅನ್ನು ಈಗಾಗಲೇ ನಿಪಿ -1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಈಗ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ -1(ಸಿ) ಎಂದು ಗುರುತಿಸಲಾಯಿತು.

6. ನಂತರ ನಮಗೆ ದೊರೆತಿದ್ದ ಶ್ರೀಗಂಧ ಮರದ ತುಂಡುಗಳಿಗೆ ಸಂಬಂಧ ಪಟ್ಟಂತೆ ನಮ್ಮ ಇಲಾಖಾ FOC Number 23/2019-20 ರಂತೆ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ಮೇಲೆ ಹೇಳಿದ ಶಸ್ತ್ರಾಸ್ತ್ರ ಮತ್ತು ಸ್ಫೋಟಕ ವಸ್ತುಗಳ ಬಗ್ಗೆ ನ್ಯಾಯಾಲಯದಿಂದ ಅನುಮತಿಯನ್ನು ಪಡೆದು, ಚಾಸಾ-1 ರವರು ಶೃಂಗೇರಿ ಪೋಲೀಸರಿಗೆ ಪಂಚನಾಮ ಆಧಾರದ ಮೇಲೆ ನಿಪಿ -2 ರಂತೆ ದೂರನ್ನು ನೀಡಿರುತ್ತಾರೆ. ನಿಪಿ-1 ಮಹಜರ್ ನ ಅಡಿಯಲ್ಲಿ ನಾವು ಅಮಾನತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ 10 ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ.

**:: ಪಾಟೀ ಸವಾಲು:: 1 ರಿಂದ 4 ನೇ ಆರೋಪಿಗಳ ಪರ ಶ್ರೀ. ಹೆಚ್.ಆರ್.ಯು ವಕೀಲರಿಂದ::**

1. 1 ನೇ ಆರೋಪಿಯನ್ನು ಚಿಕ್ಕಮಗಳೂರು ಗ್ರಾಮಾಂತರ ಪೋಲೀಸರು ಮತ್ತೊಂದು ಪ್ರಕರಣದಲ್ಲಿ ಬಂಧಿಸಿರುತ್ತಾರೆ ಎನ್ನುವ ವಿಚಾರ ನನಗೆ ಚಾಸಾ-1 ರವರಿಂದ ದಿಃ 29-02-2020 ರಂದು ಸಂಜೆ ಸುಮಾರು 4.00 ಗಂಟೆ ಸಮಯಕ್ಕೆ ಮೊದಲ ಬಾರಿಗೆ ತಿಳಿದು ಬಂದಿರುತ್ತದೆ. ಚಾಸಾ-1 ರವರು 1 ನೇ ಆರೋಪಿಯ ಮನೆಗೆ ದಾಳಿ ಮಾಡಬೇಕೆನ್ನುವ ವಿಚಾರವನ್ನು ಶೃಂಗೇರಿ ಪೋಲೀಸರಿಗಾಗಲೀ ಅಥವಾ ಕೆರೆಕಟ್ಟೆಯ ವನ್ಯಜೀವಿ ಘಟಕದ ಅಧಿಕಾರಿಗಳಿಗಾಗಲೀ ತಿಳಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಚಾಸಾ-1 ರವರು ಅವರಿಗೆ ಇದ್ದ ಮಾಹಿತಿಯನ್ನು ನಮ್ಮ ಕಛೇರಿಯಲ್ಲಿಯೇ ತಿಳಿಸಿರುತ್ತಾರೆ. ನಮ್ಮ ಶೃಂಗೇರಿ ಕಛೇರಿಯ ಸುತ್ತ ಮುತ್ತ ಹಲವಾರು ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ನಮಗೆ ಚಾಸಾ-1 ರವರು ಮಾಹಿತಿಯನ್ನು ತಿಳಿಸಿದ ನಂತರದಲ್ಲಿ ನಮ್ಮ ಕಛೇರಿಯ ಸುತ್ತ ಮುತ್ತ ಇರುವ ಮನೆಗಳ ವಾಸಿಗಳಿಗೆ ನನ್ನ ಸಮಕ್ಷಮ ದಾಳಿಯ ಬಗ್ಗೆ ತಿಳಿಸಿರುವುದಿಲ್ಲ.

2. ನಾನು ಶೃಂಗೇರಿಯ ವಲಯ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ ಸುಮಾರು 1 ವರೆ ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ-7 ರವರು ಶೃಂಗೇರಿ ಪಟ್ಟಣ ಪಂಚಾಯಿತಿಯ ಸದಸ್ಯರಾಗಿದ್ದರು ಎನ್ನುವ ವಿಚಾರ ನನಗೆ ತಿಳಿದಿರುತ್ತದೆ. ಚಾಸಾ-7 ರವರು ಬಿ ಜೆ ಪಿ ರಾಜಕೀಯ ಪಕ್ಷದಿಂದ ಆಯ್ಕೆಯಾದ ಸದಸ್ಯರಾಗಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಚಾಸಾ-7 ರವರು

ಬಿ ಜೆ ಪಿ ರಾಜಕೀಯ ಪಕ್ಷದ ನಾಯಕರಾಗಿದ್ದು, ಚಾಸಾ-5 , ಚಾಸಾ-6 ಮತ್ತು ಚಾಸಾ-8 ರಿಂದ ಚಾಸಾ-12 ರವರು ಚಾಸಾ-7 ರವರ ರಾಜಕೀಯ ಪಕ್ಷದಲ್ಲಿ ಹಿಂಬಾಲಕರಾಗಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. 1 ನೇ ಆರೋಪಿ ಹಿಂದೆ ಬಿ ಜೆ ಪಿ ಪಕ್ಷದಲ್ಲಿ ಇದ್ದು, ಈ ಪ್ರಕರಣ ಆಗುವ ಪೂರ್ವದಲ್ಲಷ್ಟೇ ಸದರಿ ಪಕ್ಷವನ್ನು ಬಿಟ್ಟು ಕಾಂಗ್ರೆಸ್ ರಾಜಕೀಯ ಪಕ್ಷಕೆಕ ಸೇರಿರುತ್ತಾರೆ ಎನ್ನುವ ಬಗ್ಗೆ ಸಹ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

3. ಶೃಂಗೇರಿಯ ಕಾಂಚೀನಗರದಲ್ಲಿ ನೂರಾರು ವಾಸದ ಮನೆಗಳು ಇರುತ್ತದೆ ಎಂದರೆ ಸರಿ. ಸದರಿ ನೂರಾರು ಮನೆಗಳಲ್ಲಿ 1 ನೇ ಆರೋಪಿಯದ್ದೇ ಮನೆ ಎಂದು ನಮಗೆ ನಮ್ಮ ಇಲಾಖಾ ವಾಹನ ಚಾಲಕನಾದ ಪ್ರಕಾಶ್ ರವರು ತೋರಿಸಿಕೊಟ್ಟಿದ್ದರು. ನಾವು 1 ನೇ ಆರೋಪಿಯ ಮನೆಯ ಬಳಿ ತಲುಪುವ ಪೂರ್ವದಲ್ಲಿಯೇ ಚಾಸಾ-5 ರಿಂದ ಚಾಸಾ-12 ರವರು ಸದರಿ ವಾಸದ ಮನೆಯ ಬಳಿ ಹಾಜರಿದ್ದರು. ಈ ವ್ಯಕ್ತಿಗಳನ್ನು ಹೊರತು ಪಡಿಸಿ ಇನ್ನೂ ಹಲವಾರು ಸಾರ್ವಜನಿಕರು ಸದರಿ ಸ್ಥಳದಲ್ಲಿ ನಾವು ಹೋಗುವಷ್ಟರಲ್ಲೇ ಸೇರಿದ್ದರು. ಸದರಿ ವ್ಯಕ್ತಿಗಳು ಯಾವ ಕಾರಣಕ್ಕೆ ಸೇರಿದ್ದರೋ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-5 ರಿಂದ ಚಾಸಾ-12 ರವರು ಯಾರು ಸಹ ಕಾಂಚೀನಗರದ ನಿವಾಸಿಗಳು ಆಗಿರುವುದಿಲ್ಲ ಎಂದರೆ ಸರಿ. 1 ನೇ ಆರೋಪಿಯ ಮನೆಯ ಬಳಿ ಸೇರಿದ್ದ ವ್ಯಕ್ತಿಗಳಲ್ಲಿ ಸುತ್ತ ಮುತ್ತಲಿನ ಮನೆಯ ವಾಸಿಗಳು ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಅಂದಾಜು ಸದರಿ ಸ್ಥಳದಲ್ಲಿ ನೂರಾರು ಜನ ವ್ಯಕ್ತಿಗಳು ಸೇರಿದ್ದರು. ಕಾಂಚೀನಗರವು ಶೃಂಗೇರಿ ಪೋಲೀಸ್ ಠಾಣೆಯಿಂದ ಕೇವಲ 1 ಕಿ. ಮೀ. ಗಿಂತ ಹತ್ತಿರದಲ್ಲಿ ಇರುವ ಸ್ಥಳವಾಗಿರುತ್ತದೆ ಎಂದರೆ ಸರಿ. ಅಲ್ಲಿ ಸೇರಿದ್ದ ನೂರಾರು ವ್ಯಕ್ತಿಗಳಲ್ಲಿ ಯಾವುದೇ ಪೋಲೀಸರು ಇರುವುದು ನಾನು ನೋಡಿರುವುದಿಲ್ಲ.

4. ನಿಪಿ-1 ಮಹಜರ್ ತಯಾರಿಸುವ ಪೂರ್ವದಲ್ಲಿ ಅದರಲ್ಲಿ ಕಾಣಿಸಿರುವ ಪಂಚರಿಗೆ ನಾವು ಯಾವುದೇ ನೋಟೀಸು ನೀಡಿರುವುದಿಲ್ಲ. ಅಲ್ಲಿ ಸೇರಿದ್ದ ನೂರಾರು ವ್ಯಕ್ತಿಗಳಲ್ಲಿ ಚಾಸಾ-5 ರಿಂದ ಚಾಸಾ-12 ರವರನ್ನೇ ಪಂಚರಾಗಿ ಗುರುತಿಸಲು ಯಾವುದಾದರೂ ಪ್ರತ್ಯೇಕ ಕಾರಣ ಇರುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದರಿ ವ್ಯಕ್ತಿಗಳು ತಾವಾಗಿಯೇ ಮುಂದೆ ಬಂದಿದ್ದ ಕಾರಣ ಅವರನ್ನು ನಾವು ಪಂಚರನ್ನಾಗಿ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ನಾವು ಸ್ಥಳಕ್ಕೆ ಹೋದಾಗ ಸದರಿ ಮನೆಯ ಬಾಗಿಲು ಮುಚ್ಚಿರುತ್ತದೆ. ಸದರಿ ಮನೆಯ ಬಾಗಿಲನ್ನು ಇಲಾಖಾ ಅಧಿಕಾರಿಗಳಾದ ನಾವು ಹಾಗೂ ಪಂಚರು ಸೇರಿ ತಟ್ಟಿರುತ್ತೇವೆ. ಸದರಿ ಮನೆಯ ಬಾಗಿಲನ್ನು ಒಂದು ಮಹಿಳೆ ತೆರೆದಿರುತ್ತಾರೆ. ನಾವು ಅವರನ್ನು ವಿಚಾರಿಸಿದಾಗ ಅವರು 1 ನೇ ಆರೋಪಿಯ ಹೆಂಡತಿ ಎಂದು ಗುರುತಿಸಿಕೊಂಡಿರುತ್ತಾರೆ. ಸದರಿ ಮನೆಯಲ್ಲಿ ಸದರಿ ಮಹಿಳೆಯನ್ನು ಹೊರತು ಪಡಿಸಿ ಬೇರೆ

ಯಾರೂ ಇರಲಿಲ್ಲ. ನಾನು ವೈಯುಕ್ತಿಕವಾಗಿ ಇಡೀ ಮನೆಯನ್ನು ಪರಿಶೀಲಿಸಿರುತ್ತೇನೆ. ನಾನು ಹೇಳುತ್ತಿರುವ ದಿನಾಂಕದಂದು 1 ನೇ ಆರೋಪಿಯ ಪತ್ನಿಗೆ 2 ನೇ ಮಗು ಜನಿಸಿ ಕೇವಲ 14 ದಿನ ಆಗಿತ್ತು ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ಮಹಿಳೆಗೆ ಮತ್ತೊಂದು 14 ದಿನ ಪ್ರಾಯದ ಮಗು ಹೊರತು ಪಡಿಸಿ, 1 ವರೆ ವರ್ಷದ ಮತ್ತೊಂದು ಮಗು ಸಹ ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನೋಡಿದಂತೆ ಸದರಿ ಮನೆಯಲ್ಲಿ ಯಾವುದೇ ಮಕ್ಕಳು ದಾಳಿ ಸಮಯದಲ್ಲಿ ಇರಲಿಲ್ಲ.

5. ನಿಪಿ-1 ರಲ್ಲಿ ನಾನು ಸದರಿ ಮನೆಯಲ್ಲಿದ್ದ ವ್ಯಕ್ತಿಗಳ ಸಹಕಾರದೊಂದಿಗೆ ಮತ್ತು ಅವರ ಸಮಕ್ಷಮ ಅದನ್ನು ಬರೆದಿರುತ್ತೇನೆ ಎಂದು ತೋರಿಸಿರುತ್ತೇನೆ ಎಂದರೆ ಸರಿ. ನನ್ನ ಕರ್ತವ್ಯದ ಅವಧಿಯಲ್ಲಿ ನಿಪಿ-1 ಮಹಜರ್ ಹೊರತು ಪಡಿಸಿ ಇನ್ನೂ ಹಲವಾರು ಮಹಜರ್ ಗಳನ್ನು ಬರೆದಿರುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ವ್ಯಕ್ತಿಯ ಸಮಕ್ಷಮದಲ್ಲಿ ಮಹಜರ್ ಬರೆದ ಸಂದರ್ಭದಲ್ಲಿ ಸದರಿ ವ್ಯಕ್ತಿಯ ಸಂಪೂರ್ಣ ಮಾಹಿತಿಯನ್ನು ಬರೆಯಬೇಕಾಗುತ್ತದೆ ಎಂದರೆ ಸರಿ. ನಿಪಿ-1 ಮಹಜರ್ ನಲ್ಲಿ 1 ನೇ ಆರೋಪಿಯ ಪತ್ನಿಯ ಮಾಹಿತಿ ಆಗಲೀ ಅಥವಾ ಅವರ ವಿಳಾಸವಾಗಲೀ ಅಥವಾ ಇತರೆ ಮಾಹಿತಿಗಳ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ನಾನು ಹೇಳುತ್ತಿರುವ 1 ನೇ ಆರೋಪಿಯ ಪತ್ನಿಯ ಸಹಿ ಸಹ ನಿಪಿ -1 ಮಹಜರ್ ನಲ್ಲಿ ಇರುವುದಿಲ್ಲ ಎಂದರೆ ಸರಿ.

6. 2020 ಸಾಲಿನಷ್ಟರಲ್ಲಿ ಎಲ್ಲರ ಬಳಿ Smart Phone ಗಳು ಬಂದಿದ್ದವು ಎನ್ನುವ ಬಗ್ಗೆ ನನಗೆ ತಿಳಿದಿರುತ್ತದೆ. ದಾಳಿ ಸಮಯದಲ್ಲಿ ನನ್ನ ಬಳಿ ಹಾಗೂ ಚಾಸಾ-1, ಚಾಸಾ-3 ಮತ್ತು ಚಾಸಾ-4 ರವರ ಬಳಿ Smart Phone ಗಳು ಇದ್ದವು ಎಂದರೆ ಸರಿ. ಈ ಭಾಗವು ನಕ್ಸಲ್ ಪೀಡಿತ ಪ್ರದೇಶವಾದ ಕಾರಣ ನಮ್ಮ ಇಲಾಖೆಗೆ ತನಿಖೆಗೆ ಅಗತ್ಯವಾದ ಎಲ್ಲಾ ಉತ್ತಮ ಸಾಮಾಗ್ರಿಗಳಾದ ಕ್ಯಾಮೆರಾ, ಟಾರ್ಚ್ ಗಳು ಹಾಗೂ ಇತರೆ ವಸ್ತುಗಳನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾಳಿಯ ದಿನ ನಮಗೆ ಸಿಕ್ಕಿರುತ್ತದೆ ಎಂದು ನಾನು ಹೇಳುತ್ತಿರುವ ಶ್ರೀಗಂಧ ಮರದ ತುಂಡುಗಳ ಹಾಗೂ ಶಸ್ತ್ರಾಸ್ತ್ರ ಮತ್ತು ಸ್ಪೋಟಕ ವಸ್ತುಗಳ ಪೋಟೋಗಳನ್ನು ನಾವು ತೆಗೆದಿರುವುದಿಲ್ಲ, ಆ ರೀತಿ ಪೋಟೋಗಳನ್ನು ನಮ್ಮ Smart Phone ಇಂದಾಗಲೀ ಅಥವಾ ಇಲಾಖಾ Camera ಗಳಿಂದಾಗಲೀ ತೆಗೆಯಲು ನಮಗೆ ಆ ದಿನ ಯಾವುದೇ ತೊಂದರೆ ಇರಲಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ FOC Number 23/2019-20 ಇನ್ನೂ ಸಹ ವಿಚಾರಣಾ ಹಂತದಲ್ಲಿದ್ದು, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ

ಎಂದರೆ ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಚಿಕ್ಕಮಗಳೂರು ಗ್ರಾಮಾಂತರ ಪೋಲೀಸ್ ಠಾಣೆಯ ಪ್ರಕರಣದಲ್ಲೂ ಸಹ ಅಮಾನತು ಪಡಿಸಿಕೊಳ್ಳಲಾಗಿದೆ ಎಂದು ಹೇಳಲಾದ ದಂತವು ಆನೆಗೆ ಸಂಬಂಧ ಪಟ್ಟಿದ್ದಾಗಿರುವುದಿಲ್ಲ ಎಂದು ವರದಿ ಬಂದಿರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

7. ನಾವು ದಾಳಿ ಮಾಡಿದ ಮನೆಯನ್ನು ಮುಂದೆ 1 ನೇ ಆರೋಪಿಗೆ ಸಂಬಂಧ ಪಟ್ಟಿದ್ದು, ಎಂದು ತೋರಿಸಲು ನಾವು ಸದರಿ ಮನೆಯದ್ದಾಗಲೀ ಅಥವಾ ಅಲ್ಲಿ ಇದ್ದರು ಎನ್ನಲಾದ ಮಹಿಳೆಯದ್ದಾಗಲೀ ಪೋಟೋಗಳನ್ನು ನಾವು ತೆಗೆದಿರುವುದಿಲ್ಲ. ಒಂದು ಸ್ಥಳದಲ್ಲಿ ತನಿಖೆಗೆ ಹೋದ ಸಂದರ್ಭದಲ್ಲಿ ಸಾಕ್ಷಿಗಳ ಪೋಟೋಗಳನ್ನು ಮುಂದೆ ನ್ಯಾಯಾಲಯದಲ್ಲಿ ಗುರುತಿಸಬೇಕಾದ ಅವಶ್ಯಕತೆ ಇರುವುದರಿಂದ ತೆಗೆಯಬೇಕಾಗುತ್ತದೆ ಎನ್ನುವ ಮಾಹಿತಿ ನನಗೆ ಇರುತ್ತದೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳಾದ ದಿಃ29-02-2020 ರಂದು ಚಾಸಾ-1 ರವರಿಂದ ನಮಗೆ 1 ನೇ ಆರೋಪಿಯ ವಿರುದ್ಧ ಮಾಹಿತಿ ಬಂದಿರುವ ಬಗ್ಗೆ, ನಂತರ 1 ನೇ ಆರೋಪಿಯ ಮನೆಯನ್ನು ಪ್ರಕಾಶ್ ರವರು ನಮಗೆ ತೋರಿಸಿಕೊಟ್ಟಿರುತ್ತಾರೆ ಎನ್ನುವ ಬಗ್ಗೆಯಾಗಲೀ, ಸದರಿ ಮನೆಗೆ ನಾವು ದಾಳಿ ಮಾಡಿ ಸದರಿ ಮನೆಯ ಬಾಗಿಲನ್ನು 1 ನೇ ಆರೋಪಿಯ ಹೆಂಡತಿ ತೆರೆದಿರುತ್ತಾರೆ ಎನ್ನುವುದಾಗಲೀ , ಸದರಿ ಮನೆಯನ್ನು ಪರಿಶೀಲಿಸಿದಾಗ ನಮಗೆ ಶ್ರೀಗಂಧ ಮರದ ತುಂಡುಗಳು ಮತ್ತು ಮು. ಮಾ -1 ರಿಂದ 10 ಸ್ಫೋಟಕ ವಸ್ತುಗಳು ದೊರಕಿರುತ್ತದೆ ಮತ್ತು ಅವುಗಳನ್ನು ನಿಪಿ-1 ಮಹಜರ್ ನ ಅಡಿಯಲ್ಲಿ ಪಂಚರ ಸಮಕ್ಷಮ ನಾವು ಅಮಾನತು ಪಡಿಸಿಕೊಂಡಿರುತ್ತೇವೆ ಎಂದು ಹೇಳಿರುವ ವಿಚಾರಗಳು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ. ನಿಪಿ -1 ಮಹಜರ್ ಅನ್ನು ನಾವುಗಳು ಚಾಸಾ-5 ರಿಂದ ಚಾಸಾ-12 ರವರ ಚಿತಾವಣೆ ಮೇರೆಗೆ ನಮ್ಮ ಕಛೇರಿಯಲ್ಲಿಯೇ ಸುಳ್ಳಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ -1 ರಲ್ಲಿ ಕಂಡು ಬರುವ ಸಹಿಗಳನ್ನೆಲ್ಲಾ ನಮ್ಮ ಕಛೇರಿಯಲ್ಲಿಯೇ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಮು. ಮಾ 1 ರಿಂದ 10 ವಸ್ತುಗಳನ್ನು 1 ನೇ ಆರೋಪಿಯ ಮನೆಯಿಂದ ನಾವು ಅಮಾನತು ಪಡಿಸಿಕೊಂಡಿರುತ್ತೇವೆ ಎಂದು ನಾನು ಹೇಳುತ್ತಿರುವ ವಿಚಾರ ಸಂಪೂರ್ಣ ಸುಳ್ಳು ಎಂದರೆ ಸರಿಯಲ್ಲ. ಮು.ಮಾ 1 ರಿಂದ 10 ವಸ್ತುಗಳಿಗೂ ಹಾಗೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-1 ರವರು ನಮ್ಮ ಅಧೀನ ಸಿಬ್ಬಂದಿಗಳನ್ನು ಬಳಸಿ ಚಾಸಾ-5 ರಿಂದ ಚಾಸಾ-12 ರವರ ಚಿತಾವಣೆ ಮೇರೆಗೆ ಆರೋಪಿಗಳ ವಿರುದ್ಧ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಅದಕ್ಕೆ ಪೂರಕವಾಗಿ ಪ್ರಸ್ತುತ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**::ಮರುವಿಚಾರಣೆ ಇಲ್ಲ::**

(ದಿನಾಂಕಃ20-09-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರ.ದ.ನ್ಯಾದಂಃ ಶೃಂಗೇರಿ .